# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1110 (1237) |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13/03/2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ ನಡೆಯುವ ಮೊರಾರ್ಜಿ ದೇಸಾಯಿ, ಕಿತ್ತೂರ ರಾಣಿ ಚೆನ್ನಮ್ಮ, ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಇಂದಿರಾಗಾಂಧಿ ವಸತಿ ಶಾಲೆಗಳಲ್ಲಿ ಯಾವೆಲ್ಲ ಹುದ್ದೆಗಳು ವಿಶೇಷ ಶಿಕ್ಷಕರಾಗಿರುತ್ತಾರೆ: | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರು, ಬೋಧಕ, ಬೋಧಕೇತರ ಹಾಗೂ ಗ್ರೂಪ್ ಡಿ ವೃಂದದ ಹುದ್ದೆಗಳು ಸೇರಿದಂತೆ 25 ಹುದ್ದೆಗಳು ಮಂಜೂರಾಗಿರುತ್ತವೆ.<br><br>ಬೋಧಕ ವೃಂದದಲ್ಲಿ ಭಾಷಾ ಶಿಕ್ಷಕರು, ಕನ್ನಡ, ಆಂಗ್ಲ, ಹಿಂದಿ, ಮತ್ತು ವಿಷಯ ಶಿಕ್ಷಕರು, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ದೈಹಿಕ ಶಿಕ್ಷಣ, ಕಂಪ್ಯೂಟರ್, ಸಂಗೀತ, ಚಿತ್ರಕಲಾ ಶಿಕ್ಷಕರು ಎಂದು ವರ್ಗೀಕರಿಸಿ ಹುದ್ದೆ ಮಂಜೂರಾಗಿರುತ್ತವೆ. ಆದರೆ, ವಿಶೇಷ ಶಿಕ್ಷಕರ ಹುದ್ದೆಯನ್ನು ಮಂಜೂರು ಆಗಿರುವುದಿಲ್ಲ.<br><br>ಮಂಜೂರಾದ ಹುದ್ದೆಗಳಂತೆ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬೋಧಕ, ಬೋಧಕೇತರ ಹಾಗೂ ಗ್ರೂಪ್ ಡಿ ವೃಂದದ ಹುದ್ದೆಗಳನ್ನು ಅಳವಡಿಸಿಕೊಳ್ಳಲಾಗಿದ್ದು, ವಿಶೇಷ ಶಿಕ್ಷಕರೆಂದು ವರ್ಗೀಕರಿಸಿರುವುದಿಲ್ಲ. |
| ಆ) | ಸಂಗೀತ ಶಿಕ್ಷಕ, ದೈಹಿಕ ಶಿಕ್ಷಕರು ಹಾಗೂ ಕಂಪ್ಯೂಟರ್ ಶಿಕ್ಷಕರನ್ನು ವಿಶೇಷ ಶಿಕ್ಷಕರು ಎಂದು ಪರಿಗಣಿಸುವುದಾದರೆ ಚಿತ್ರಕಲಾ ಶಿಕ್ಷಕರನ್ನು ವಿಶೇಷ ಶಿಕ್ಷಕರು ಎಂದು ಪರಿಗಣಿಸದೇ ಇರಲು ಕಾರಣವೇನು; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಎಲ್ಲಾ ಹುದ್ದೆಗಳಿಗೆ ಪ್ರತ್ಯೇಕವಾಗಿ ವಿದ್ಯಾರ್ಹತೆ, ನೇಮಕಾತಿ ವಿಧಾನಗಳನ್ನು ನಮೂದಿಸಲಾಗಿದೆ. ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬೋಧಕ, ಬೋಧಕೇತರ ಹಾಗೂ ಗ್ರೂಪ್ ಡಿ ವೃಂದದ ಹುದ್ದೆಗಳನ್ನು ಅಳವಡಿಸಿಕೊಳ್ಳಲಾಗಿದ್ದು, ಯಾವುದೇ ವಿಶೇಷ ಶಿಕ್ಷಕರೆಂದು ವರ್ಗೀಕರಿಸಿರುವುದಿಲ್ಲ. |
| ಇ) | ಚಿತ್ರಕಲಾ ಶಿಕ್ಷಕರ ವೇತನ ಹೊರತುಪಡಿಸಿ ಬೇರೆ ಎಲ್ಲಾ ಶಿಕ್ಷಕರ ಹುದ್ದೆಗಳು ಸಮಾನ ವೇತನ ಮಾಡಿ ಕೇವಲ ಚಿತ್ರಕಲಾ ಶಿಕ್ಷಕರ ಹುದ್ದೆಗೆ ಮಾತ್ರ ವೇತನ ಕಡಿಮೆ ಮಾಡಲು ಕಾರಣವೇನು: ಹಾಗೂ ಚಿತ್ರಕಲಾ ಶಿಕ್ಷಕರ ವೇತನ ತಾರತಮ್ಯ ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಸಹಕಾರ ಸಂಘಗಳ ನೋಂದಣಿ ಕಾಯಿದೆ 1960ರಡಿಯಲ್ಲಿ 1999 ರಲ್ಲಿ ಕಾರ್ಯಾರಂಭ ಮಾಡಿದ್ದು, ಕಾಲಕಾಲಕ್ಕೆ ಜಿಲ್ಲಾವಾರು, ಪ್ರವರ್ಗವಾರು, ವಸತಿ ಶಾಲೆಗಳನ್ನು ಮಂಜೂರು ಮಾಡಿದ್ದು, ಮಂಜೂರಾಗಿರುವ ವಸತಿ ಶಾಲೆಗಳಿಗೆ ಬೋಧಕ/ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ವಸತಿ ಶಾಲೆಗಳಿಗೆ ಬೋಧಕ/ಬೋಧಕೇತರ ಹುದ್ದೆಗಳು ಮಂಜೂರಾಗಿರುವ ಆದೇಶಗಳಲ್ಲಿ ಹುದ್ದೆಗಳಿಗೆ ವೇತನ ಶ್ರೇಣಿಗಳನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ. ಆದೇಶ ಸಂಖ್ಯೆ: ಸಕಇ 61 ಮೊದೇಶಾ 2006 ದಿನಾಂಕ: 20.11.2006 ರಲ್ಲಿ ಚಿತ್ರಕಲಾ ಮತ್ತು ಸಂಗೀತ ಶಿಕ್ಷಕರ ವೇತನ ಶ್ರೇಣಿಗೂ ಹಾಗೂ ಇತರೆ ಶಿಕ್ಷಕರ ವೇತನ ಶ್ರೇಣಿಗೂ ವ್ಯತ್ಯಾಸ ಇರುತ್ತದೆ. |

<table>
<tr>
<td></td>
<td></td>
<td>
<table>
<tr><th>ವಿವರ</th><th>ಭಾಷಾ ಮತ್ತು ಐಚ್ಛಿಕ ಶಿಕ್ಷಕರ ವೇತನ ಶ್ರೇಣಿ</th><th>ಚಿತ್ರಕಲಾ ಶಿಕ್ಷಕರ ವೇತನ ಶ್ರೇಣಿ</th></tr>
<tr><td>2006ರ ಹುದ್ದೆ ಮಂಜೂರಾತಿ ಆದೇಶದಂತೆ</td><td>4575-8400</td><td>4150-7800</td></tr>
<tr><td>2011</td><td>8825-16000</td><td>8000-14800</td></tr>
<tr><td>2012</td><td>17650-32000</td><td>16000-29600</td></tr>
<tr><td>2018</td><td>33450-62600</td><td>30350-58250</td></tr>
<tr><td>2024</td><td>54175-99400</td><td>49050-92500</td></tr>
</table>
ನಿಗಧಿಪಡಿಸಿದ ವೇತನ ಶ್ರೇಣಿಯನ್ವಯ 2011 ರಲ್ಲಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಆದರೆ, ಮಾನ್ಯ ನ್ಯಾಯಾಲಯದ ಆದೇಶದಂತೆ ಚಿತ್ರಕಲಾ ಶಿಕ್ಷಕರ ನೇಮಕಾತಿ ಅಧಿಸೂಚನೆ ರದ್ದಾಗಿರುತ್ತದೆ. ಆದ್ದರಿಂದ, ಈ ಅವಧಿಯಲ್ಲಿ ಯಾವುದೇ ಚಿತ್ರಕಲಾ ಶಿಕ್ಷಕರು ನೇಮಕವಾಗಿರುವುದಿಲ್ಲ. ಸಂಗೀತ ಶಿಕ್ಷಕರು ಸೇರಿದಂತೆ ಇತರೆ ಶಿಕ್ಷಕರು 2011ರಲ್ಲಿ ನೇಮಕಗೊಂಡಿರುತ್ತಾರೆ.
2011ರಲ್ಲಿ ರದ್ದುಪಡಿಸಲಾಗಿದ್ದ ಅಧಿಸೂಚನೆಯನ್ನು 2016ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಸರ್ಕಾರದ ಆದೇಶಗಳಲ್ಲಿ ಹಾಗೂ 2011ರ ಅಧಿಸೂಚನೆಯಲ್ಲಿ ನಿಗಧಿಪಡಿಸಿದ ವೇತನ ಶ್ರೇಣಿಯನ್ವಯ ಪದವೀಧರ ಮತ್ತು ಡಿಪ್ಲೊಮ ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ಅಧಿಸೂಚಿಸಲಾಗಿರುತ್ತದೆ.
2016ರಲ್ಲಿ ಅಧಿಸೂಚಿಸಲಾದ ಪದವೀಧರ ಚಿತ್ರಕಲಾ ಶಿಕ್ಷಕರ ಹುದ್ದೆಗಳ ಆಯ್ಕೆಪಟ್ಟಿಯನ್ನು ದಿನಾಂಕ: 02.07.2022 ರಲ್ಲಿ ಹಾಗೂ ಡಿಪ್ಲೊಮ ಚಿತ್ರಕಲಾ ಶಿಕ್ಷಕರ ಹುದ್ದೆಗಳ ಆಯ್ಕೆಪಟ್ಟಿಯನ್ನು ದಿನಾಂಕ: 10.11.2022ರಲ್ಲಿ ಆಯೋಗವು ಹೊರಡಿಸಿರುತ್ತದೆ. ಅದರಂತೆ, ಸಂಘವು ದಾಖಲಾತಿ ಪರಿಶೀಲನೆ ಕೈಗೊಂಡು, ನಿಯಮಾನುಸಾರ 2016ರ ಅಧಿಸೂಚನೆಯಲ್ಲಿ ನಿಗಧಿಪಡಿಸಿದ 16000-29600ರ ವೇತನ ಶ್ರೇಣಿಯನ್ವಯ 2022-23ನೇ ಸಾಲಿನಲ್ಲಿ 30350-58250 ರಂತೆ ನೇಮಕಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ.
</td>
</tr>
<tr>
<td>ಈ)</td>
<td>ಈಗಾಗಲೇ ಸಂಗೀತ ಶಿಕ್ಷಕರ ಮತ್ತು ಸ್ಟಾಫ್ ನರ್ಸ್‌ಗಳ ವೇತನ ಸರಿಪಡಿಸಲಾಗಿದ್ದು, ಆದರೆ ಚಿತ್ರಕಲಾ ಶಿಕ್ಷಕರಿಗೆ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು; ಯಾವ ಕಾಲಮಿತಿಯಲ್ಲಿ ಈ ವೇತನ ತಾರತಮ್ಯವನ್ನು ಸರಿಪಡಿಸಲಾಗುತ್ತದೆ? (ವಿವರ ನೀಡುವುದು)</td>
<td>
2011ರ ಅಧಿಸೂಚನೆಯಲ್ಲಿ ನೇಮಕಗೊಂಡ ಸಂಗೀತ ಶಿಕ್ಷಕರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ನಿಗಧಿಪಡಿಸಿರುವ ವೇತನ ಶ್ರೇಣಿಯನ್ನು ಪರಿಷ್ಕರಿಸುವಂತೆ ಸಲ್ಲಿಸಿರುವ ಮನವಿಯ ಬಗ್ಗೆ, ಆದೇಶ ಸಂಖ್ಯೆ: ಹಿಂವಕ 219 ಬಿಇಟಿ 2015, ದಿನಾಂಕ:30.06.2015 ರಲ್ಲಿ ವೇತನ ಪರಿಷ್ಕರಿಸಲು ಆದೇಶಿಸಲಾಗಿರುತ್ತದೆ. ಅದರಂತೆ, ದಿನಾಂಕ:30.06.2015 ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಿಸಲಾಗಿರುತ್ತದೆ.
2011ರ ಅಧಿಸೂಚನೆಯಲ್ಲಿ ನೇಮಕಗೊಂಡ ಸ್ಟಾಫ್ ನರ್ಸ್ ಗಳು ಆರೋಗ್ಯ ಇಲಾಖೆಯಲ್ಲಿ ನಿಗಧಿಪಡಿಸಿರುವ ವೇತನ ಶ್ರೇಣಿಯಂತೆ ಪರಿಷ್ಕರಿಸುವಂತೆ ಸಲ್ಲಿಸಿರುವ ಮನವಿಯ ಬಗ್ಗೆ, ಆದೇಶ ಸಂಖ್ಯೆ: ಸಕಇ 195 ಮೊದೇಶಾ 2016 ದಿನಾಂಕ:30.08.2016 ರಲ್ಲಿ ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ.
</td>
</tr>
</table>

| | | |
|---|---|---|
| | | ಚಿತ್ರಕಲಾ ಶಿಕ್ಷಕರಿಂದ ಮನವಿ ಸ್ವೀಕೃತವಾಗಿದ್ದು, ವೇತನ ಶ್ರೇಣಿಯನ್ನು ಪರಿಷ್ಕರಿಸುವ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ನಿಗಧಿಪಡಿಸಿರುವ ವೇತನ ಶ್ರೇಣಿಯನ್ನು ಪರಿಶೀಲಿಸಿ ವೇತನ ಪರಿಷ್ಕರಣೆ ಮಾಡಲು ನಿಯಮಾನುಸಾರ ಪರಿಶೀಲಿಸಲಾಗುವುದು. |

**SWD/93/MDS/2026**

**(ಡಾ: ಹೆಚ್.ಸಿ ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.